ನಾನು ಕಂಡ ವಿವೇಕಾನಂದ

ಡಾ.ಆರ್. ಬಾಲಸುಬ್ರಹ್ಮಣ್ಯಂ



# ವಾಸ್ತವ ನೆಲೆಗಟ್ಟಿನ ಅಪ್ರತಿಮ ನಾಯಕ

ನಾಯಕತ್ವವನ್ನು ಹಲವು ಬಗೆಯಲ್ಲಿ ವಿವರಿಸಲಾಗಿದೆ. ಬಹುಶಃ ವಿಶ್ವದಲ್ಲಿ ಅತ್ಯಂತ ಹೆಚ್ಚು ಅನ್ವೇಷಣೆಗೆ ಒಳಗಾಗಿರುವ ವಿಷಯಗಳಲ್ಲಿ ಇದೂ ಒಂದು. ಅಮೆರಿಕ ಒಂದರಲ್ಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಸುಮಾರು 25 ಸಾವಿರ ಪುಸ್ತಕಗಳು ಪ್ರಕಟವಾಗಿವೆ. ಇಷ್ಟೆಲ್ಲಾ ಇದ್ದರೂ ನಾಯಕತ್ವವನ್ನು ಸ್ಪಷ್ಟವಾಗಿ ವಿವರಿಸುವುದು ಇಂದಿಗೂ ಕಷ್ಟದ ಕೆಲಸವೇ ಆಗಿದೆ. ವಿವೇಕಾನಂದರನ್ನು ಒಬ್ಬ ಸನ್ಯಾಸಿ, ಪ್ರವಾದಿ, ಸಮಾಜ ಸುಧಾರಕ, ರಾಷ್ಟ್ರೀಯವಾದಿ, ತತ್ವಜ್ಞಾನಿ, ಯೋಗಿ, ಬರಹಗಾರ, ಶ್ರೇಷ್ಠ ವಾಗ್ಮಿ, ಶಿಕ್ಷಣ ಶಾಸ್ತ್ರಜ್ಞ ಇತ್ಯಾದಿಯಾಗಿ ಗುರುತಿಸಲಾಗುತ್ತದೆ. ಆದರೆ ಅವರನ್ನು ಒಬ್ಬ ನಾಯಕನಾಗಿ ಗುರುತಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಶೋಧನೆ ಆಗಿಲ್ಲ. ಒಬ್ಬ ಅಸಾಧಾರಣ ನಾಯಕರಾಗಿದ್ದ ವಿವೇಕಾನಂದರ ಗುಣಗಳನ್ನು ಕ್ರಮೇಣ ಅರ್ಥ ಮಾಡಿಕೊಳ್ಳುವ ಕಾರ್ಯ ಈಗಷ್ಟೇ ಆರಂಭವಾಗಿದೆ.

ವಿವೇಕಾನಂದರು ಪ್ರತಿಪಾದಿಸಿದ ಬಹಳಷ್ಟು ಮಹತ್ವದ ವಿಷಯಗಳನ್ನು ನಾಯಕತ್ವ ಪರಿಣತರು ಇಂದಿನ ವಾಣಿಜ್ಯ ಶಾಲೆಗಳಲ್ಲಿ ಕಲಿಸಲು ಮುಂದಾಗಿದ್ದಾರೆ. ನಾಯಕತ್ವದ ಬಗ್ಗೆ ಹಲವಾರು ವ್ಯಾಖ್ಯೆಗಳು ಇವೆಯಾದರೂ, ಪ್ರಬಲ ದೃಷ್ಟಿಕೋನವನ್ನು ಪ್ರತಿಪಾದಿಸಿ ಅದರ ಅನುಷ್ಠಾನಕ್ಕೆ ದಾರಿ ಮಾಡಿಕೊಡುವುದು ಪರಿಣಾಮಕಾರಿ ನಾಯಕತ್ವಕ್ಕೆ ಅತ್ಯಗತ್ಯ ಎಂಬುದನ್ನು ಬಹುತೇಕರು ಒಪ್ಪುತ್ತಾರೆ. ಸಂಘಟನೆಯ ಗುರಿಯನ್ನು ಸಮಗ್ರವಾಗಿ ಮತ್ತು ಸ್ಪಷ್ಟವಾಗಿ ತಲುಪಿಸಲು ಯಶಸ್ವಿ ನಾಯಕರು ಇಂತಹ ದಾರ್ಶನಿಕ ಹೇಳಿಕೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಭವಿಷ್ಯಸೂಚಕ ದೃಷ್ಟಿಕೋನದ ನಿರೂಪಣೆಯ ಮೂಲಕ ಒಬ್ಬರ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಮತ್ತೊಬ್ಬರಿಗೆ ತಲುಪಿಸಲು ಮತ್ತು ತಮ್ಮೆಲ್ಲರ ಸಾಮಾನ್ಯ ದೃಷ್ಟಿಕೋನದ ಬಗ್ಗೆ ತಂಡ ಅಥವಾ ಸಂಘಟನೆಗೆ ಮನವರಿಕೆ ಮಾಡಿಕೊಡಲು ಸಾಧ್ಯ. ಆಯಾಯ ಸಂದರ್ಭದ ವಾಸ್ತವಗಳ ಬಗ್ಗೆ ಸಂಪೂರ್ಣ ಅರಿವಿದ್ದಾಗ ಮಾತ್ರ ಯೋಜಿತ ದೃಷ್ಟಿಕೋನದ ಚೌಕಟ್ಟು ರೂಪಿಸಬಹುದು.

ವಾಣಿಜ್ಯೋದ್ಯಮಿ ಮತ್ತು ನಾಯಕತ್ವ ಪರಿಣತ ಮ್ಯಾಕ್ಸ್ ಡಿ ಪ್ರೀ, 'ಒಬ್ಬ ನಾಯಕನ ಮೊದಲ ಜವಾಬ್ದಾರಿ ಎಂದರೆ ವಾಸ್ತವವನ್ನು ವ್ಯಾಖ್ಯಾನಿಸುವುದು' ಎಂದು ಪ್ರತಿಪಾದಿಸಿದ್ದಾರೆ. ಆದಿಶಂಕರಾಚಾರ್ಯರು ತಮ್ಮ 'ವಿವೇಕ ಚೂಡಾಮಣಿ'ಯಲ್ಲಿ ವಾಸ್ತವ ಮತ್ತು ಅವಾಸ್ತವದ ಚಿತ್ರಣ ನೀಡಿದ್ದಾರೆ. ಮ್ಯಾಕ್ಸ್ ಡಿ ಪ್ರೀ ಹೊರ ಪ್ರಪಂಚದ ವಾಸ್ತವಗಳನ್ನು ಆಧಾರವಾಗಿಟ್ಟು ಬರೆದಿದ್ದರೆ, ಶಂಕರರು ವಾಸ್ತವದ ಸೂಕ್ಷ್ಮ ನೆಲೆಗಟ್ಟುಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ಈ ಎರಡೂ ಬಗೆಯಲ್ಲಿ ವಾಸ್ತವ ಜಗತ್ತನ್ನು ತೆರೆದಿಟ್ಟ ಅಪರೂಪದ ವ್ಯಕ್ತಿಗಳಲ್ಲಿ ವಿವೇಕಾನಂದರು ಒಬ್ಬರು. ಬಾಹ್ಯವನ್ನು ಆಂತರ್ಯದೊಂದಿಗೆ ಬೆಸೆಯುವ ಗಮನಾರ್ಹ ದೃಷ್ಟಿಕೋನವನ್ನಷ್ಟೇ ಅವರು ನೀಡಲಿಲ್ಲ, ಅವೆರಡನ್ನೂ ಸಮನ್ವಯಗೊಳಿಸಿ ತಮ್ಮೊಳಗಿನ ನಿಜವಾದ ಆಂತರ್ಯವನ್ನು ಶೋಧಿಸಲು ಹೋರಾಡುವವರಿಗೆ ಸಂಕಲ್ಪದ ಅರಿವನ್ನು ಮೂಡಿಸಿದ್ದಾರೆ.

ಭಾರತದ ಕಟು ವಾಸ್ತವಗಳನ್ನು ಗಮನದಲ್ಲಿ ಇಟ್ಟುಕೊಂಡು, ಸಮೂಹವನ್ನು ಮೇಲೆತ್ತುವ ಕಾರ್ಯದಲ್ಲಿ ತೊಡಗಿಕೊಳ್ಳುವುದು ಹೇಗೆ ಎಂದು ಅವರು ಯುವಕರಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ಮೂಲಕ ಯುವಜನತೆ ತಮ್ಮ ಆಂತರ್ಯದ ಹುಡುಕಾಟ ನಡೆಸಬೇಕು ಎಂಬುದು ಅವರ ಆಶಯವಾಗಿತ್ತು. ಇಂತಹ ವಾಸ್ತವಗಳಿಂದ ಒಡಮೂಡಿದ ದೃಷ್ಟಿಕೋನವನ್ನು, 1984ರ ಜೂನ್‌ನಲ್ಲಿ ಮೈಸೂರಿನ ಮಹಾರಾಜರಿಗೆ ಅವರು ಬರೆದಿರುವ ಪತ್ರದಲ್ಲಿ ನಾವು ಕಾಣಬಹುದು– 'ದೇಶದ ಎಲ್ಲ ಸಂಕಷ್ಟಗಳ ಮೂಲವು ಬಡವರ ಸ್ಥಿತಿಗತಿಯನ್ನು ಅವಲಂಬಿಸಿದೆ. ನಮ್ಮ ಕೆಳ ವರ್ಗದ ಜನರಿಗೆ ನಾವು ಮಾಡಬೇಕಾದ ಏಕೈಕ ಸೇವೆಯೆಂದರೆ ತಾವು ಕಳೆದುಕೊಂಡಿರುವ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ನೆರವಾಗುವ ಶಿಕ್ಷಣವನ್ನು ಅವರಿಗೆ ನೀಡಬೇಕಾಗಿರುವುದು. ಇದೇ ನಮ್ಮ ಜನ ಮತ್ತು ರಾಜರ ಮುಂದಿರುವ ಮಹತ್ವದ ಸವಾಲು. ಈ ನಿಟ್ಟಿನಲ್ಲಿ ಈವರೆಗೂ ಯಾವ ಕೆಲಸವೂ ಆಗಿಲ್ಲ. ಶತಮಾನಗಳಿಂದಲೂ ತುಳಿತಕ್ಕೊಳಗಾಗಿರುವ ಬಡವರು ಕೊನೆಗೆ ತಾವು ಮಾನವರು ಎಂಬುದನ್ನೇ ಮರೆತುಬಿಟ್ಟಿದ್ದಾರೆ' ಎಂದು ಬರೆದಿದ್ದರು.

ಇನ್ನೊಂದು ಕಡೆ ವಿವೇಕಾನಂದರು ಹೀಗೆ ಬರೆದಿದ್ದಾರೆ– 'ಓಹ್ ಬಡವರ ಬಗ್ಗೆ ನಾವೇನು ಅಂದುಕೊಂಡಿದ್ದೇವೆ ಎಂಬುದನ್ನು ಯೋಚಿಸಿದರೆ ನನಗೆ ವೇದನೆಯಾಗುತ್ತದೆ. ಮೇಲೆ ಬರಲು ಅವರಿಗೆ ಅವಕಾಶವಿಲ್ಲ, ಅಗತ್ಯವಾದ ಮಾರ್ಗವಿಲ್ಲ. ಅವರಿಗೆ ಯಾರೂ ಮಿತ್ರರಿಲ್ಲ, ನೆರವಿಲ್ಲ– ಎಷ್ಟೇ ಕಷ್ಟಪಟ್ಟರೂ ಮೇಲೆ ಬರಲು ಅವರಿಗೆ ಸಾಧ್ಯವಾಗುತ್ತಿಲ್ಲ, ಪ್ರತಿ ದಿನವೂ ಅವರು ದುಃಸ್ಥಿತಿಗೆ ಇಳಿಯುತ್ತಿದ್ದಾರೆ. ಈ ಕ್ರೂರ ಸಮಾಜ ಅವರಿಗೆ ಪೆಟ್ಟಿನ ಮೇಲೆ ಪೆಟ್ಟು ನೀಡುತ್ತಿದೆ. ಯಾವಾಗ ಈ ಪೆಟ್ಟು ಬೀಳುತ್ತದೆ ಎಂಬುದೂ ಅವರಿಗೆ ತಿಳಿದಿರುವುದಿಲ್ಲ. ತಾವೂ ಮನುಷ್ಯರು ಎಂಬುದನ್ನು ಅವರು ಮರೆತುಬಿಟ್ಟಿರುವುದರ ಫಲಶ್ರುತಿಯೇ ಗುಲಾಮಗಿರಿ'.

ದಾರ್ಶನಿಕ ವಿವೇಕಾನಂದರು ಎರಡು ಪ್ರತ್ಯೇಕ ದೃಷ್ಟಿಕೋನಗಳನ್ನು ಹೊಂದಿದ್ದರು. ರಾಷ್ಟ್ರ ಮಟ್ಟದಲ್ಲಿ ಅವರು ಹೊಂದಿದ್ದ ದೃಷ್ಟಿಕೋನವೆಂದರೆ, ದೇಶದ ಸಮುದಾಯವನ್ನು ಲೌಕಿಕವಾಗಿ ಮೇಲೆತ್ತುವುದು. ಇದನ್ನು ಭಾರತೀಯ ಆಧ್ಯಾತ್ಮಿಕ ಪರಂಪರೆಯಿಂದ ಒಡಮೂಡಿದ ಶಿಕ್ಷಣದ ನೆರವಿನಿಂದ ಸಾಧಿಸಬಹುದು ಎಂದು ಅವರು ಹೇಳಿದ್ದರು. ಜಾಗತಿಕ ಮಟ್ಟದಲ್ಲಿ ತಾವು ಹೊಂದಿದ್ದ ದೃಷ್ಟಿಕೋನವನ್ನು, ಸಾರ್ವತ್ರಿಕ ಧರ್ಮದ ಪರಿಕಲ್ಪನೆಯಾಗಿ ಹಿಂದುತ್ವವನ್ನು ಪ್ರತಿಪಾದಿಸಿ ವಿಶ್ವ ಧಾರ್ಮಿಕ ಸಂಸತ್ತಿನಲ್ಲಿ ಮಾಡಿದ ಭಾಷಣದಲ್ಲಿ ಅವರು ತೆರೆದಿಟ್ಟಿದ್ದಾರೆ.

ತನ್ನ ವ್ಯವಸ್ಥೆಯಲ್ಲಿ ಕಿರುಕುಳ ಮತ್ತು ಅಸಹಿಷ್ಣುತೆಗೆ ಜಾಗ ಕೊಡದ, ಪ್ರತಿ ಮಹಿಳೆ ಹಾಗೂ ಪುರುಷನಲ್ಲೂ ದೈವತ್ವವನ್ನು ಗುರುತಿಸುವ, ತನ್ನೊಳಗಿನ ಸತ್ಯಾನ್ವೇಷಣೆಗಾಗಿ ಮಾನವೀಯತೆಗೆ ಒತ್ತು ನೀಡುವ ಪ್ರಮುಖ ಗುರಿಯನ್ನು ಧರ್ಮ ಹೊಂದಿರಬೇಕು ಎಂಬುದು ವಿವೇಕಾನಂದರ ನಿಲುವಾಗಿತ್ತು. ◆